156ನೇ ಪ್ರ ಸಂ: 67
ಆರ್‌ಕೆ
12.01.26

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್.ರವಿಕುಮಾರ್, ಶ್ರೀ ಸಿ.ಟಿ. ರವಿ ಹಾಗೂ ಡಾ|| ತಳವಾರ್ ಸಾಬಣ್ಣ ಇವರುಗಳು ನಿಯಮ-330 ರಡಿ ನೀಡಿರುವ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಉತ್ತರ.**

* * * * *

**ಸೂಚನೆ:**

ಕಲಬುರಗಿ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನ ಭಾಗೋಡಿ ಸ.ನಂ.57, 69 ರಲ್ಲಿ ಖಾಸಗಿಯಾಗಿ ಗಣಿ ಗುತ್ತಿಗೆ ಪಡೆದವರು ಬೃಹತ್ ಗಾತ್ರದ ಹಿಟಾಚಿಗಳನ್ನು ಬಳಸಿಕೊಂಡು ಪ್ರತಿದಿನ ಸುಮಾರು 300-400 ಟಿಪ್ಪರ್ ಗಳಿಂದ ಕಲಬುರಗಿ, ಬೀದರ್, ಮಹಾರಾಷ್ಟ್ರ, ತೆಲಂಗಾಣಕ್ಕೆ ಅಕ್ರಮವಾಗಿ ಮಾರಾಟ ಮಾಡುತ್ತಿರುವ ಕುರಿತು ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರಲ್ಲಿ ಪ್ರಸ್ತಾಪಿಸ ಬಯಸುತ್ತೇವೆ.

**ಉತ್ತರ:**

- ಕಲಬುರಗಿ ಜಿಲ್ಲೆ, ಚಿತ್ತಾಪೂರ ತಾಲ್ಲೂಕು, ಭಾಗೋಡಿ ಗ್ರಾಮದ ಸ.ನಂ. 57 ಮತ್ತು 69ರ ಪಟ್ಟಾ ಜಮೀನುಗಳಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಯಾವುದೇ ಮರಳು ಗಣಿಗಾರಿಕೆಗೆ ಲೈಸೆನ್ಸ್ ನೀಡಿರುವುದಿಲ್ಲ.

- ಮುಂದುವರದು, ಭಾಗೋಡಿ ಗ್ರಾಮದ ಸ.ನಂ. 57 ಮತ್ತು 69ರಲ್ಲಿ ಗಣಿಗಾರಿಕೆ ಸಂಬಂಧ ಉಪನಿರ್ದೇಶಕರ ಕಛೇರಿಯ ತಾಂತ್ರಿಕ ಅಧಿಕಾರಿಗಳು ಕಂದಾಯ ಇಲಾಖೆಯ ಗ್ರಾಮ ಆಡಳಿತಾಧಿಕಾರಿ ಇವರೊಂದಿಗೆ ದಿನಾಂಕ:05.12.2025 ರಂದು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ, ಸಲ್ಲಿಸಿರುವ ವರದಿಯಂತೆ ಭಾಗೋಡಿ ಗ್ರಾಮದ ಸ.ನಂ.69ರ ಪ್ರದೇಶದ ವಿಸ್ತೀರ್ಣವು 08-23 ಎಕರೆ ಇದ್ದು, ಸದರಿ ಪ್ರದೇಶದಲ್ಲಿ ಯಾವುದೇ ಗಣಿಗಾರಿಕೆ ನಡೆಸಿರುವುದು ಕಂಡು ಬಂದಿರುವುದಿಲ್ಲ.

- ಭಾಗೋಡಿ ಗ್ರಾಮದ ಪಟ್ಟಾ ಜಮೀನಿನ ಸ.ನಂ.57ರ ವಿಸ್ತೀರ್ಣ 31-14 ಎಕರೆ ಇದ್ದು, ಕಾಗಿಣಾ ನದಿಗೆ ಹೊಂದಿಕೊಂಡಂತೆ ಇರುತ್ತದೆ. ಸದರಿ ಜಮೀನಿನ ಭಾಗಶಃ ಪ್ರದೇಶದಲ್ಲಿ ವ್ಯವಸಾಯ ಮಾಡುತ್ತಿರುವುದು ಕಂಡು ಬಂದಿದ್ದು, ಯಾವುದೇ ಗಣಿಗಾರಿಕೆ ನಡೆಯುತ್ತಿಲ್ಲ. ಉಳಿದ ಪ್ರದೇಶವು ನೀರಿನಿಂದ ಆವೃತ್ತಗೊಂಡಿದ್ದು, ಗಿಡ-ಗಂಟೆಗಳು ಬೆಳೆದಿರುವುದು ಕಂಡು ಬಂದಿದ್ದು, ಈ ಪ್ರದೇಶದಲ್ಲಿಯೂ ಸಹ ಯಾವುದೇ ಗಣಿಗಾರಿಕೆ ನಡೆದಿರುವುದು ಕಂಡುಬಂದಿಲ್ಲ.

ಸಂಖ್ಯೆ: ಸಿಐ-ಎಂಎಂಎನ್/331/2025

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.